**ದಿಃ03.03.2018 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 6 ನೇ ಪ್ರತಿವಾದಿ ಪರ ವಕೀಲರಿಂದಃ**

ದಾವೆ ಹಾಕುವ ಸಂದರ್ಭದಲ್ಲಿ ದಾವಾ ಆಸ್ತಿಯ ಉತಾರೆಯನ್ನು ಹಾಜರು ಮಾಡಿದ್ದೇನೋ ಇಲ್ಲವೋ ನೆನಪಿಗೆ ಬರುತ್ತಿಲ್ಲ. ಆಗ ಆ ಉತಾರೆಯಲ್ಲಿ 1 ನೇ ಪ್ರತಿವಾದಿಯ ಹೆಸರನ್ನು ಮಾತ್ರ ನಾನು ನೋಡಿರುತ್ತೇನೆ. ಆ ಸಂದರ್ಭದಲ್ಲಿ 6 ನೇ ಪ್ರತಿವಾದಿಯ ಹೆಸರು ದಾವಾ ಆಸ್ತಿಯ ಉತಾರೆಯಲ್ಲಿ ನಮೂದು ಆಗಿತ್ತು ಅಂದರೆ ಸರಿಯಲ್ಲ. ಆ ಕಾರಣಕ್ಕೆ ಆ ಸಂದರ್ಭದಲ್ಲಿ ದಾವಾ ಆಸ್ತಿಯ ಉತಾರೆಯನ್ನು ಹಾಜರು ಮಾಡದೇ ನಂತರದಲ್ಲಿ ಹಾಜರು ಮಾಡಿರುತ್ತೇವೆ ಅಂದರೆ ಸರಿಯಲ್ಲ. ಈ 1 ರಿಂದ 5 ನೇ ಪ್ರತಿವಾದಿಯರು 6 ನೇ ಪ್ರತಿವಾದಿಯರಿಗೆ ದಾವಾ ಆಸ್ತಿಯನ್ನು ಮಾರಿದ್ದಾರೆ ಅಂತ 2015 ನೇ ಇಸವಿಯಲ್ಲಿ ನಮಗೆ ಗೊತ್ತಾಯಿತು. ದಾವಾ ಹಾಕಿದ ನಂತರ ದಾವಾ ಆಸ್ತಿಯನ್ನು ಮಾರಾಟ ಮಾಡಬಾರದು ಅಂತ ನ್ಯಾಯಾಲಯದಿಂದ ತಾತ್ಕಾಲಿನ ತಡೆಯಾಜ್ಞೆ ಪಡೆದುಕೊಂಡಿದ್ದೇನೋ ಇಲ್ಲವೋ ನೆನಪಿಗೆ ಬರುತ್ತಿಲ್ಲ. 1 ನೇ ಪ್ರತಿವಾದಿ ಕೈಫಿಯತ್ ಸಲ್ಲಿಸಿದ ನಂತರ ಮಾರಾಟವಾದ ವಿಷಯ ನನಗೆ ಗೊತ್ತಾಯಿತು.

2. 2014 ನೇ ಇಸವಿಯಲ್ಲಿಯೇ 1 ರಿಂದ 5 ನೇ ಪ್ರತಿವಾದಿಯರು ಆಸ್ತಿ ಮಾರಾಟ ಮಾಡಿದ ಬಗ್ಗೆ ನನಗೆ ಗೊತ್ತಾಗಿತ್ತು ಅಂದರೆ ಸರಿಯಲ್ಲ. 6 ಮತ್ತು 7 ನೇ ಪ್ರತಿವಾದಿಯರಿಗೆ ದಾವೆಯಲ್ಲಿ ಸಲ್ಲಿಸಬೇಕು ಅಂತ ಅರ್ಜಿ ಸಲ್ಲಿಸಿರುತ್ತೇವೆ ಅಂದರೆ ಸರಿ. 6 ಮತ್ತು 7 ನೇ ಪ್ರತಿವಾದಿಯರಿಗೆ ಉಳಿದ ಪ್ರತಿವಾದಿಯರು ಬರೆದುಕೊಟ್ಟ ಕ್ರಯಪತ್ರ ರದ್ದುಪಡಿಸಬೇಕು ಅಂತ 2017 ನೇ ಇಸವಿಯವರೆಗೂ ನಾವು ಕೇಳಿಲ್ಲ ಅಂತ ಕೇಳಿದ ಪ್ರಶ್ನೆಗೆ ನನಗೆ ಗೊತ್ತಾಗುತ್ತಿಲ್ಲವೆಂದು ಉತ್ತರಿಸುತ್ತಾರೆ. 6 ನೇ ಪ್ರತಿವಾದಿ ದಾವಾ ಆಸ್ತಿಯನ್ನು ಖರೀದಿಸುವ ಮೊದಲು ಸಾರ್ವಜನಿಕ ತಿಳುವಳಿಕೆಗಾಗಿ ದಿನಪತ್ರಿಕೆಯಲ್ಲಿ ವಕೀಲರ ಮುಖಾಂತರ ನೋಟಿಸು ಕೊಟ್ಟಿದ್ದರು ಅಂದರೆ ನನಗೆ ಗೊತ್ತಿಲ್ಲ. ಸದರಿ ಪತ್ರಿಕಾ ಪ್ರಕಟಣೆಯನ್ನು ನೋಡಿ ಯಾವುದೇ ತಕರಾರುಗಳನ್ನು ಸಲ್ಲಿಸಿಲ್ಲ ಅಂತ ಮಾಡಿದ ಸಲಹೆಗೆ ಆ ರೀತಿಯ ನೋಟಿಸು ನನಗೆ ಗೊತ್ತಾಗಿರುವುದಿಲ್ಲ ಎಂದು ಉತ್ತರಿಸುತ್ತಾರೆ. ಈ ಜಮೀನು 1 ನೇ ಪ್ರತಿವಾದಿಯ

ಕಬ್ಜಾವಹಿವಾಟಿಯಲ್ಲಿದೆ. 6 ನೇ ಪ್ರತಿವಾದಿಯ ಬಳಿ ಈ ದಾವಾ ಆಸ್ತಿಯ ಕಬ್ಜಾ ಇದೆ ಅಂದರೆ ನನಗೆ ಗೊತ್ತಿಲ್ಲ. ಅವರಿಂದ ದಾವಾ ಆಸ್ತಿಯ ಕಬ್ಜಾ ಕೊಡಿಸಬೇಕು ಅಂತ ನಾನು ಪ್ರಾರ್ಥನೆ ಮಾಡಿಲ್ಲ ಅಂದರೆ ಸರಿ. ಈ ಖರೀದಿ ಕರಾರು ಪತ್ರದ ಶರತ್ತುಗಳು ನನ್ನ ಮತ್ತು 1 ರಿಂದ 5 ನೇ ಪ್ರತಿವಾದಿಯರಿಗೆ ಮಾತ್ರ ಸಂಬಂಧಪಟ್ಟಿದ್ದು 6 ನೇ ಪ್ರತಿವಾದಿಗೆ ಸಂಬಂಧಪಟ್ಟಿಲ್ಲ ಅಂದರೆ ಸರಿಯಲ್ಲ. ನಾನು ಸಂಚಕಾರ ಅಂತ ಕೊಟ್ಟ ಹಣವನ್ನು 1 ರಿಂದ 5 ನೇ ಪ್ರತಿವಾದಿಯರಿಂದ ಮಾತ್ರ ಪಡೆದುಕೊಳ್ಳಲು ಹಕ್ಕುದಾರಳು ಇರುತ್ತೇನೆ ಅಂದರೆ ಸರಿಯಲ್ಲ. ನಾನು 6 ನೇ ಪ್ರತಿವಾದಿಯ ವಿರುದ್ಧ ಯಾವುದೇ ಮಾಗಣಿ ಇಲ್ಲದ ಕಾರಣ ಅವರ ವಿರುದ್ಧ ಯಾವುದೇ ಆದೇಶ ಪಡೆಯಲು ನನಗೆ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಸಂಪೂರ್ಣ ವಿಚಾರಿಸಿ, ಹಣ ಕೊಟ್ಟು ಖರೀದಿ ಮಾಡಿರುವುದರಿಂದ, 6 ನೇ ಪ್ರತಿವಾದಿಯೇ ದಾವಾ ಆಸ್ತಿಯ ಸಂಪೂರ್ಣ ಮಾಲೀಕಳು ಮತ್ತು ಕಬ್ಜಾದಾರಳು ಇರುತ್ತಾರೆ ಅಂದರೆ ಸರಿಯಲ್ಲ. 2013 ನೇ ಇಸವಿಯಲ್ಲಿಯೇ 6 ನೇ ಪ್ರತಿವಾದಿಗೆ ದಾವಾ ಆಸ್ತಿ ಮಾರಾಟ ಆಗಿದೆ ಅಂತ ಗೊತ್ತಿದ್ದರೂ 2017 ರ ವರೆಗೆ ಅವರ ವಿರುದ್ಧ ನಾನು ಯಾವುದೇ ಕ್ರಮ ಕೈಗೊಂಡಿಲ್ಲ ಅಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.